ಇ) ನೀರು, ಸ್ವಚ್ಛತೆ ಮತ್ತು ಬೀದಿದೀಪಗಳಂತಹ ಮೂಲಭೂತ ಸೌಕರ್ಯಗಳನ್ನು ಉತ್ತಮ ಪಡಿಸಲು ಪ್ರಯತ್ನಿಸಲಾಗುತ್ತಿದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ 1961ರನ್ವಯ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು, ಯೋಜನಾ ಪ್ರಾಧಿಕಾರವಾಗಿರುವುದರಿಂದ ಅಧಿಸೂಚಿತ ಪ್ರದೇಶಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಗೆ ತರಲಾಗುವುದಿಲ್ಲ. ಇವುಗಳನ್ನು ಬೆಂಗಳೂರು ಮಹಾನಗರಪಾಲಿಕೆಯ ಜೊತೆಗೆ ವಿಲೀನಗೊಳಿಸಬೇಕೇ ಅಥವಾ ಪ್ರತ್ಯೇಕವಾಗಿ ಮುನಿಸಿಪಾಲಿಟಿಗಳಾಗಿ ರಚಿಸಬೇಕೇ ಎಂಬುದು ಸರ್ಕಾರದ ಪರಿಶೀಲನೆಯಲ್ಲಿದೆ.

ಕಾಪು ಪೋಲೀಸ್ ಠಾಣೆ ಸಿಬ್ಬಂದಿಗೆ ವಸತಿ ಗೃಹಗಳು

82 - ಶ್ರೀ ವಸಂತ ವಿ. ಸಾಲಿಯಾನ (ಕಾಪು) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾಪುವಿನ ಪೋಲೀಸ್ ಠಾಣೆ ಸಿಬ್ಬಂದಿಗಳಿಗೆ ವಸತಿ ಗೃಹ ನಿರ್ಮಿಸಲು ಮಂಜೂರಾತಿ ನೀಡಲಾಗಿದೆಯೇ?

ಆ) ಹಾಗಿದ್ದರೆ ಕಾಮಗಾರಿಗೆ ಎಷ್ಟು ಹಣ ಮಂಜೂರಾಗಿದೆ

ಇ) ಕಾಮಗಾರಿ ಈಗ ಯಾವ ಹಂತದಲ್ಲಿದೆ

ಈ) ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಗೃಹ ಸಚಿವರು) :

ಅ) ಕಾಪುವಿನ ಹೊರ ಪೋಲೀಸ್ ಠಾಣೆಗೆ 1 ಹೆಡ್‌ಕಾನ್ಸ್‌ಟೇಬಲ್, 4 ಪೋಲೀಸ್ ಕಾನ್ಸ್‌ಟೇಬಲ್‌ಗಳ ವಸತಿ ಗೃಹ ನಿರ್ಮಿಸಲು ಸರ್ಕಾರದಿಂದ ದಿನಾಂಕ 24-11-1993ರಂದು ಮಂಜೂರಾತಿ ನೀಡಲಾಗಿದೆ.

ಆ) ರೂ. 13.75 ಲಕ್ಷಗಳನ್ನು ಮಂಜೂರು ಮಾಡಲಾಗಿದೆ.

ಇ) ಕಾಮಗಾರಿಯು ಪ್ಲಿಂತ್ ಬೀಮ್‌ನವರೆಗೆ ಬಂದಿದೆ.

ಈ) ಏಪ್ರಿಲ್ 1996ರ ಒಳಗಾಗಿ ಪೂರ್ಣಗೊಳಿಸಬಹುದೆಂಬ ನಿರೀಕ್ಷೆಯಿದೆ.

ಬೆನಕಾಪುರ - ನಾಗೇನಹಳ್ಳಿ ಏತ ನೀರಾವರಿ ಯೋಜನೆ

83 - ಶ್ರೀ ಜಿ. ಶಂಕರ್‌ಗೌಡ (ಹೊಸಪೇಟೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹೊಸಪೇಟೆ ತಾಲ್ಲೂಕಿನ ಬೆನಕಾಪುರ-ನಾಗೇನಹಳ್ಳಿ ಏತ ನೀರಾವರಿ ಯೋಜನೆಗೆ ಇಂದಿನ ಮುಖ್ಯಮಂತ್ರಿಗಳು 9 ವರ್ಷಗಳ ಹಿಂದೆ ಅಸ್ತಿ ಭಾರ ಹಾಕಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;